

# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು



ಡಾ. ಕೆ. ಅನಂತರಾಮು

## ಮನಸ್ಸಿನ ಮಹೇಂದ್ರಜಾಲ

ಮಾನವನ ಮನಸ್ಸಿನಲ್ಲಿ ಅದ್ಭುತವಾದ ಶಕ್ತಿಯಿದೆ. ಒಬ್ಬೊಬ್ಬನ ಮನಸ್ಸು ಕೂಡ ನಾವು 'ವಿಶ್ವಮನಸ್ಸು' ಎಂದು ಹೇಳುವ ಸಮಷ್ಟಿ ಮನಸ್ಸಿನ ಒಂದು ಅಂಶವೇ ಆಗಿದೆ. ಬಿಡಿಬಿಡಿಯಾದ ಒಂದೊಂದೂ ವ್ಯಷ್ಟಿ ಮನಸ್ಸು, ಸಮಷ್ಟಿಯೆಂಬ ವಿಶ್ವ ಮನಸ್ಸಿನೊಡನೆ ಸಂಪರ್ಕ ಬೆಳೆಸಿಕೊಂಡಿದೆ. ಇಲ್ಲಿ ಕುಳಿತಿರುವ ವ್ಯಕ್ತಿಯೊಬ್ಬನು, ತನಗಿಂತ ಎಲ್ಲೋ ದೂರದಲ್ಲಿ ಕುಳಿತಿರುವ ಮತ್ತೊಬ್ಬ ವ್ಯಕ್ತಿಗೆ ತನ್ನ ಆಲೋಚನೆಗಳನ್ನು ರವಾನಿಸುವ ಶಕ್ತಿಯನ್ನು ಪಡೆದುಕೊಳ್ಳಬಹುದು. ಹಾಗೆಯೇ ಯಾರಿಗೆ ಅದು ರವಾನಿಸಲ್ಪಟ್ಟಿತೋ ಆ ವ್ಯಕ್ತಿಯು ಅದನ್ನು ಯಥಾವತ್ತಾಗಿ ಸ್ವೀಕರಿಸಿ ತಾನು ಕಾರ್ಯಪ್ರವೃತ್ತನೂ ಆಗಬಹುದು. ಮನಸ್ಸು–ಮನಸ್ಸುಗಳ ನಡುವೆ ಸಂಪರ್ಕವಿಲ್ಲದಿದ್ದರೆ ಇಂತಹ ಸಂವಹನವು ಸಾಧ್ಯವಾಗುವುದಿಲ್ಲ.

ಆಂಧ್ರಪ್ರದೇಶದ ಹೈದರಾಬಾದಿನಲ್ಲಿ ವಿಷ್ಣುಶರ್ಮನೆಂಬ ಬ್ರಾಹ್ಮಣನಿದ್ದನು. ಅವನು ಯಾವುದೋ ಉದ್ಯೋಗಸ್ಥನಾಗಿದ್ದು, ತುಂಬಾ ಗೌರವವನ್ನು ಸಂಪಾದಿಸಿಕೊಂಡಿದ್ದನು. ಅವನು ಕೆಲವು ವಿಶೇಷ ಶಕ್ತಿಗಳನ್ನು ಪಡೆದಿದ್ದನು. ಅದರ ಬಲದಿಂದ ಯಾವ ವಸ್ತುಗಳನ್ನು ಬೇಕಾದರೂ ಅವುಗಳು ಇರುವ ಜಾಗದಿಂದ ತಾನಿರುವ ಜಾಗಕ್ಕೆ ತರಿಸಬಲ್ಲವನಾಗಿದ್ದನು. ಎಲ್ಲಿಂದ ತರಿಸುತ್ತಾನೆಂಬುದು ಮಾತ್ರ ಯಾರಿಗೂ ತಿಳಿಯುವಂತಿರಲಿಲ್ಲ. ಈ ವಿಷಯ ಸ್ವಾಮಿ ವಿವೇಕಾನಂದರ ಕಿವಿಗೂ ಬಿತ್ತು. ಆ ಹೊತ್ತಿನಲ್ಲಿ ಅವರು ಹೈದರಾಬಾದಿನಲ್ಲಿಯೇ ಇದ್ದರು. "ವಿಷ್ಣುಶರ್ಮನನ್ನು ನೋಡಬೇಕು, ಅವನ ಚಮತ್ಕಾರವಿದ್ಯೆಯನ್ನು ಕಣ್ಣಾರೆ ಕಾಣಬೇಕು" ಎಂಬ ಅಭಿಲಾಷೆಯಿಂದ ಒಂದು ದಿನ ತಾವೇ ವಿಷ್ಣುಶರ್ಮನ ಬಳಿಗೆ ಹೋದರು. "ಅಯ್ಯಾ, ನೀವು ಅದ್ಭುತ ಶಕ್ತಿಸಂಪನ್ನರೆಂದು ಕೇಳಿದ್ದೇನೆ. ಅದನ್ನು ಕಣ್ಣಾರೆ ನೋಡಬೇಕೆಂದು ಬಂದಿದ್ದೇನೆ. ದಯವಿಟ್ಟು ತೋರಿಸುತ್ತೀರಾ" ಎಂದು ಕೇಳಿಕೊಂಡರು. ವಿಷ್ಣುಶರ್ಮನಿಗೆ ಸಂನ್ಯಾಸಿಗಳೆಂದರೆ ಎಲ್ಲಿಲ್ಲದ ಗೌರವ. ಆ ಹೊತ್ತಿನಲ್ಲಾದರೋ ಅವನು ಜ್ವರದ ಸಂಕಟದಿಂದ ನರಳುತ್ತಿದ್ದನು. ಅವನು ವಿವೇಕಾನಂದರಿಗೆ ನಮಸ್ಕರಿಸಿ, "ಸ್ವಾಮಿ, ನೀವು ಸಾಧುಸತ್ಪುರುಷರು. ನಾನೀಗ ಜ್ವರದಿಂದ ಸಂಕಟಪಡುತ್ತಿದ್ದೇನೆ. ನೀವು ನಿಮ್ಮ ಅಮೃತಹಸ್ತವನ್ನು ನನ್ನ ತಲೆಯಮೇಲಿಟ್ಟು, 'ಜ್ವರವು ಬಿಟ್ಟು ತೊಲಗಲಿ' ಎಂದು ಹೇಳಿಬಿಡಿ. ತರುವಾಯ ನಾನು ನಿಮಗೆ ನನ್ನ ಮಾಯಾಪ್ರಪಂಚವನ್ನು ತೋರಿಸುತ್ತೇನೆ" ಎಂದು ವಿನಂತಿಸಿಕೊಂಡನು.

ವಿಷ್ಣುಶರ್ಮನ ಪ್ರಾರ್ಥನೆಯಂತೆ, ವಿವೇಕಾನಂದರು ಅವನ ತಲೆಯ ಮೇಲೆ ತಮ್ಮ ಅಮೃತಹಸ್ತವನ್ನಿಟ್ಟು, ಜ್ವರವು ವಾಸಿಯಾಗಲೆಂದು ಸಂಕಲ್ಪಿಸಿ ಆಶೀರ್ವದಿಸಿದರು. ವಿಷ್ಣುಶರ್ಮನ ನಿರೀಕ್ಷೆ ಸುಳ್ಳಾಗಲಿಲ್ಲ. ಮರುಕ್ಷಣದಲ್ಲಿಯೇ ಅವನ ಜ್ವರವೆಲ್ಲ ಇಳಿದುಹೋಯಿತು. ಒಡನೆಯೇ ಅವನು ಸಂತಸದಿಂದ ತನ್ನ ಚಮಾತ್ಕಾರವನ್ನು ತೋರಿಸಲು ಅಣಿಯಾಗಿಬಿಟ್ಟನು. ತಾನು ಸೊಂಟಕ್ಕೆ ಬಿಗಿದುಕೊಂಡಿದ್ದ ಒಂದು ಧಟ್ಟಿಯ ಹೊರತಾಗಿ ಎಲ್ಲ ವಸ್ತ್ರಗಳನ್ನೂ ಕಳಚಿಹಾಕಿದನು. ವಿವೇಕಾನಂದರ ಹೆಗಲಮೇಲಿದ್ದ ಕಂಬಳಿಯನ್ನು ಕೇಳಿ ಪಡೆದುಕೊಂಡು, ಅದನ್ನು ಹೊದ್ದು, ತಾನೊಂದು ಮೂಲೆಯಲ್ಲಿ ಕುಳಿತುಕೊಂಡನು. ಹತ್ತಾರು ಬೆರಗುಗಣ್ಣುಗಳು ಅವನನ್ನೇ ನೋಡುತ್ತಿದ್ದವು. ಆ ಬಳಿಕ ಮಂತ್ರವಾದಿ ವಿಷ್ಣುಶರ್ಮನು, "ಈಗ ನಿಮಗೆ ಯಾವ ವಸ್ತು ಬೇಕೋ ಅದರ ಹೆಸರನ್ನು ಒಂದು ಚೀಟಿಯಲ್ಲಿ ಬರೆದುಕೊಡಿ" ಎಂದನು. ಆಗ ವಿವೇಕಾನಂದರು ದ್ರಾಕ್ಷಿ ಗೊಂಚಲು, ಕಿತ್ತಳೆಹಣ್ಣು ಎಂದು ಬರೆದುಕೊಟ್ಟರು. ಸ್ವಲ್ಪಹೊತ್ತಿನಲ್ಲಿಯೇ ವಿಷ್ಣುಶರ್ಮನು ತಾನು ಗುಡಾರದಂತೆ ಹೊದ್ದುಕೊಂಡಿದ್ದ ಕಂಬಳಿಯೊಳಗಿನಿಂದ, ಎಲ್ಲರೂ ನೋಡುತ್ತಿರುವಾಗಲೇ ರಾಶಿರಾಶಿ ದ್ರಾಕ್ಷಿಗೊಂಚಲುಗಳನ್ನು ಹೊರಕ್ಕೆ ತೆಗೆದು ಪೇರಿಸಿದನು. ಆಮೇಲೆ ಕಿತ್ತಳೆಹಣ್ಣುಗಳನ್ನು ತೆಗೆದು ಗುಡ್ಡೆ ಹಾಕಿದನು. ಅದನ್ನೇನಾದರೂ ತೂಕಕ್ಕೆ ಹಾಕಿದ್ದಾದರೆ, ಅದು ಮಂತ್ರವಾದಿಯ ಶರೀರದ ತೂಕದ ಎರಡರಷ್ಟಾಗುವಷ್ಟಿತ್ತು.

ಎಲ್ಲರೂ ಮಂತ್ರಮುಗ್ಧರಾಗಿ ಆ ಹಣ್ಣುಗಳ ರಾಶಿಯನ್ನು ನೋಡುತ್ತಿದ್ದರು. ವಿಷ್ಣುಶರ್ಮನು, "ಇದೇಕೆ ಸುಮ್ಮನೆ ನೋಡುತ್ತಿದ್ದೀರಿ, ನಿಮಗೆ ಬೇಕಾದಷ್ಟು ತಿಂದು ಸಂತೋಷಪಡಿ" ಎಂದು ಕೋರಿಕೊಂಡನು. "ಇವೆಲ್ಲ ಮಾಯಾಮಂತ್ರದ ಹಣ್ಣುಗಳು. ತಿಂದರೆ ಏನು ಹೆಚ್ಚುಕಡಮೆಯಾಗುವುದೇನೋ" ಎಂಬ ಶಂಕೆಯಿಂದ ಯಾರೂ ತಿನ್ನಲು ಮುಂದಾಗಲಿಲ್ಲ. ಆಗ ವಿಷ್ಣುಶರ್ಮನು ತಾನೇ ಮುಂದಾಗಿ ಆ ಹಣ್ಣುಗಳನ್ನು ಚಪ್ಪರಿಸುತ್ತ, "ಸಂಕೋಚವೇಕೆ, ಬನ್ನಿ" ಎಂದು ಮತ್ತೆ ಕರೆದನು. ಆಗ ಎಲ್ಲರಿಗೂ ತಿನ್ನುವ ಧೈರ್ಯ ಬಂದು, ಆನಂದದಿಂದ ಆಸ್ವಾದಿಸಿದರು. ಎಲ್ಲ ಹಣ್ಣುಗಳೂ ಪರಿಪಕ್ವವಾಗಿದ್ದವು, ರುಚಿಕರವಾಗಿದ್ದವು. ಆಮೇಲೆ ಯಾರೋ ಒಂದು ಚೀಟಿಯಲ್ಲಿ ಗುಲಾಬಿಹೂವು ಎಂದು ಬರೆದುಕೊಟ್ಟರು. ಸ್ವಲ್ಪಹೊತ್ತಿನಲ್ಲಿಯೇ ಕಂಬಳಿಯೊಳಗಿನಿಂದ ರಾಶಿರಾಶಿ ಗುಲಾಬಿಹೂವುಗಳನ್ನು ತೆಗೆದು ಗುಡ್ಡೆಹಾಕಿ ತನ್ನ ಆಟವನ್ನು ಮುಕ್ತಾಯಗೊಳಿಸಿದನು. ಆ ಗುಲಾಬಿಹೂಗಳಾದರೋ ಆಗತಾನೆ ಕಿತ್ತಂತೆ ಹೊಚ್ಚಹೊಸದಾಗಿದ್ದವು. ಅವುಗಳ ಪಕಳೆಗಳ ಮೇಲೆ ಹಿಮಮಣಿಗಳು ಹೊಳೆಯುತ್ತಿದ್ದವು. "ಹೂಂ, ಎತ್ತಿಕೊಳ್ಳಿ" ಎಂದು ಮಂತ್ರವಾದಿ ಹೇಳಿದಾಗ ಎಲ್ಲರೂ ಒಂದೊಂದು ಬೊಗಸೆ ಕೈಗೆತ್ತಿಕೊಂಡರು. ವಿವೇಕಾನಂದರು ಆಶ್ಚರ್ಯಭರಿತರಾಗಿ, "ಇಂತಹ ಅದ್ಭುತವಿದ್ಯೆಯನ್ನು ನೀವು ಹೇಗೆ ಸಾಧಿಸಿಕೊಂಡಿರಿ?" ಎಂದು ವಿಷ್ಣುಶರ್ಮನನ್ನು ಕೇಳಿದರು. ಅದಕ್ಕವನು, "ಅದ್ಭುತವೇನಿಲ್ಲ, ಎಲ್ಲವೂ ಕೈಚಳಕ" ಎಂದು ನಿರಾಳವಾಗಿ ಉತ್ತರಿಸಿದನು. "ಅದು ಏನಾದರೂ ಆಗಲಿ, ಕೇವಲ ಕೈಚಳಕವಾಗಿರಬಹುದು ಸಾಧ್ಯವಿಲ್ಲ. ಅದರ ಹಿಂದೆ ಬೇಕಾದಷ್ಟು ಸಾಧನೆಯಿದೆ. ಎಲ್ಲಿಯೋ ಇದ್ದ ವಸ್ತುವನ್ನು ಹೀಗೆ ಸಂಕಲ್ಪಮಾತ್ರದಿಂದ ಸ್ಥಳಾಂತರಿಸುವುದೇನು ಸುಮ್ಮನಾಯಿತೇ" ಎಂದು ವಿವೇಕಾನಂದರು ತಮಗೆ ತಾವೇ ಪ್ರಶ್ನಿಸಿಕೊಂಡು ಆಲೋಚನಾಪರವಶರಾಗಿಬಿಟ್ಟರು.


ಯೋಗಿಗಳು ಹೇಳುವಂತೆ ಮನಸ್ಸು ಅಖಂಡವಾದುದು ಎಂಬುದನ್ನು ಈ ಮೇಲಿನ ಘಟನೆ ತೋರಿಸಿಕೊಡುತ್ತದೆ. ಮನಸ್ಸು ವಿಶ್ವವ್ಯಾಪಿಯಾದುದು. ಒಬ್ಬೊಬ್ಬರ ಬಿಡಿಬಿಡಿಯಾದ ಕಿರುವಸ್ತುಗಳೆಲ್ಲ ಆ ವಿಶ್ವಮನಸ್ಸಿನ ಅಂಶಗಳಾಗಿವೆ. ಅವೆಲ್ಲ ಸಾಗರದ ಅಲೆಗಳಂತೆ ಪರಸ್ಪರ ಸಂಬಂಧಿಸಿವೆ. ಹೀಗೆ ಸಂಬಂಧಿಸಿಕೊಂಡಿರುವುದರಿಂದಲೇ ಮತ್ತೊಬ್ಬರ ಮೇಲೆ ಪ್ರಯೋಗಿಸಬಲ್ಲವರು ತಾವೇ ಒಂದು ಶಕ್ತಿಯ ಮಹಾಮಂತ್ರವಾಗಿ, ತಾವು ಇಚ್ಛೆಸಿದ್ದನ್ನೆಲ್ಲ ಮಾಡಬಲ್ಲವರಾಗುತ್ತಾರೆ. ಮನಸ್ಸಿನ ಮೇಲೆ ಪ್ರಭಾವಬೀರುವ ಈ ಬಗೆಯ ಶಕ್ತಿಸಾಮರ್ಥ್ಯಗಳನ್ನು ಚಮತ್ಕಾರಗಳಿಗೆ ಸೀಮಿತಗೊಳಿಸಿಕೊಳ್ಳದೆ ಆತ್ಮಮುಖಿಯಾಗಿ ಸಾಗಲು ಬಳಸಿಕೊಳ್ಳಬೇಕು. ಆಗ ನಾವು ಈ ಜನ್ಮದಲ್ಲಿಯೇ ಪೂರ್ಣಾತ್ಮರಾಗಬಹುದು, ಮುಕ್ತಾತ್ಮರಾಗಿಬಿಡಬಹುದು. ಈ ಸನ್ನಿವೇಶದಲ್ಲಿ ಸ್ವಾಮಿ ವಿವೇಕಾನಂದರು ಕೂಡ ತಮ್ಮ ತಪಸ್ಸಿನ ಬಲದಿಂದ ವಿಶೇಷ ಸಿದ್ಧಿಗಳನ್ನು ಸಂಪಾದಿಸಿಕೊಂಡಿದ್ದರು ಎಂಬುದನ್ನು ಅರಿಯಬಹುದಾಗಿದೆ. ಆದರೆ ಅದನ್ನೆಂದೂ ಅವರು ಪ್ರದರ್ಶನಕ್ಕಿಡಲಿಲ್ಲ. ಈ ಪ್ರಸಂಗದಲ್ಲಿ ಅದು ಅಯಾಚಿತವಾಗಿ ಬಹಿರಂಗವಾಗಿಬಿಟ್ಟಿತು ಎಂಬುದು ಸಂತಸವನ್ನುಂಟುಮಾಡುತ್ತದೆ. "ನನಗೆ ಈ ಯೋಗದ ವಿಷಯವಾಗಿ ತಿಳಿದಿರುವುದು ಎಲ್ಲೋ ಅಲ್ಪ. ಆದರೆ ಆ ಅಲ್ಪವನ್ನು ಕಲಿಯಲು ನಾನು ಮೂವತ್ತುವರ್ಷ ಕಠೋರವಾದ ಸಾಧನೆ ಮಾಡಿದ್ದೇನೆ. ಕೆಲವು ವೇಳೆ ನಾನು ದಿನಕ್ಕೆ ಇಪ್ಪತ್ತು ಗಂಟೆ ಹೆಣಗಿದ್ದೇನೆ. ಕೆಲವು ರಾತ್ರಿಗಳಲ್ಲಿ ಕೇವಲ ಒಂದುಗಂಟೆ ನಿದ್ರೆಮಾಡಿದ್ದೇನೆ. ಕೆಲವು ವೇಳೆ ಗುಹೆಗಳಲ್ಲಿ ವಾಸ ಮಾಡಿದ್ದೇನೆ. ಇಷ್ಟಾದರೂ ಈ ಯೋಗಶಾಸ್ತ್ರದ ಹೊರವಲಯವನ್ನು ಕೂಡ ನಾನು ಮುಟ್ಟಿಲ್ಲ. ಆದರೆ ಅದು ಸತ್ಯ, ಅದ್ಭುತವಾಗಿದೆ, ವಿಶಾಲವಾಗಿದೆ ಎಂಬುದನ್ನು ಅರಿತಿದ್ದೇನೆ" ಎಂದು ವಿವೇಕಾನಂದರಾಡುವ ಮಾತುಗಳನ್ನು ನೆನೆದರೆ ಅವರ ಸಾಧನೆಯ ಆಳಅಗಲಗಳ ಒಂದು ಸೀಳುನೋಟ ನಮಗೆ ಲಭ್ಯವಾಗುತ್ತದೆ.

# ಆಂಡಾಳ್


**ಕಥೆ :** ಆರ್.ವಿ. **ಚಿತ್ರ :** ಶಂಕರ್

**1** ಶ್ರೀವಿಲ್ಲಿಪುತ್ತೂರು ಎನ್ನುವ ಗ್ರಾಮದಲ್ಲಿ ವಿಷ್ಣುಚಿತ್ತರು ಎಂಬ ಮಹಾನ್ ಭಕ್ತರಿದ್ದರು. ಅವರನ್ನು ಪೆರಿಯಾಳ್ವಾರ್ ಎಂದೂ ಕರೆಯುತ್ತಿದ್ದರು. ಅವರು ಆಳ್ವಾರರು ಎಂದು ಹೆಸರಾದ ವಿಷ್ಣುವಿನ ಹನ್ನೆರಡು ಮಹಾನ್ ಭಕ್ತರಲ್ಲಿ ಒಬ್ಬರು. ಒಂದು ದಿನ ಅವರು ದೇವಸ್ಥಾನದ ಉದ್ಯಾನವನದಲ್ಲಿದ್ದ ತುಳಸಿ ಗಿಡಗಳ ನಡುವೆ ಜ್ಯೋತಿಯೊಂದನ್ನು ನೋಡಿದರು.


**2** ಅದೊಂದು ಹೆಣ್ಣುಮಗುವಾಗಿತ್ತು. ಅದನ್ನು ದೇವರ ಕೊಡುಗೆ ಎಂದೇ ಭಾವಿಸಿದ ಅವರು ದೇವಸ್ಥಾನದ ವಿಗ್ರಹದ ಮುಂದೆ ಅದನ್ನು ಇರಿಸಿದರು.




**3** ಮನೆಗೆ ತೆರಳಿದ ಅವರು ತಮ್ಮ ಪತ್ನಿಗೆ ಮಗುವನ್ನು ನೀಡಿದರು.




**4** ಒಂದು ಸುಮುಹೂರ್ತದ ದಿನ ಮಗುವನ್ನು ತೊಟ್ಟಿಲಿಗೆ ಹಾಕಿ, ನಾಮಕರಣ ಮಾಡಿದರು.





**5** ಮಗು ಚೆನ್ನಾಗಿ ಬೆಳೆಯಿತು. ಅವಳು ಕಲಿಯಬೇಕಾದ್ದನ್ನೆಲ್ಲ ತನ್ನ ತಂದೆಯಿಂದ ಕಲಿತುಕೊಂಡಳು.


**6** ತನ್ನ ತಂದೆ ಮತ್ತು ಇತರ ಭಕ್ತರು ಕೃಷ್ಣನನ್ನು ಕುರಿತು ಕೀರ್ತನೆ ಮಾಡುವುದನ್ನು ಅವಳು ಕೇಳುತ್ತಿದ್ದಳು. ಇದರಿಂದಾಗಿ ತಾನೂ ‘ಬೃಂದಾವನ ಲಾಲ’ನಾದ ಶ್ರೀಕೃಷ್ಣನಲ್ಲಿ ಉತ್ಕಟ ಭಕ್ತಿಯನ್ನು ಬೆಳೆಸಿಕೊಂಡಳು.




**7** ಬೆಳೆದು ದೊಡ್ಡವಳಾದಾಗ, ಅವಳು ತನ್ನನ್ನು ಬೃಂದಾ ವನದ ಗೋಪಿ ಎಂದು ಭಾವಿಸಿದಳು. ದೇವಸ್ಥಾನದಲ್ಲಿದ್ದ ದೇವರ ವಿಗ್ರಹವನ್ನೇ ಶ್ರೀಕೃಷ್ಣನೆಂದು ಭಾವಿಸಿದಳು.





**7** ಹೀಗೆ ಆಲೋಚಿಸುತ್ತಿದ್ದ ಗೋದಾ ಹೊಸ ಸೀರೆಯನ್ನು ಉಟ್ಟುಕೊಂಡು, ರತ್ನಾಭರಣಗಳನ್ನು ಹಾಕಿಕೊಂಡಳು. ಬುಟ್ಟಿಯಲ್ಲಿದ್ದ ಹೂವುಗಳನ್ನು ತೆಗೆದು ಅವುಗಳನ್ನು ತಾನೇ ಧರಿಸಿಕೊಂಡಳು. ಕನ್ನಡಿಯಲ್ಲಿ ನೋಡಿಕೊಂಡು ತನ್ನನ್ನು ತಾನೇ ಬಹುವಾಗಿ ಮೆಚ್ಚಿಕೊಂಡಳು.





**9** ಅಂದಿನಿಂದ ಗೋದಾ ಪ್ರತಿದಿನವೂ, ದೇವರಿಗಾಗಿ ಮುಡುಪಾಗಿದ್ದ ಹಾರಗಳನ್ನು ತಾನೇ ಧರಿಸಿಕೊಂಡು, ಕನ್ನಡಿಯಲ್ಲಿ ನೋಡಿಕೊಂಡು ಸಂತೋಷಪಡುತ್ತಿದ್ದಳು. ವಿಷ್ಣುಚಿತ್ತರು ಈ ಹಾರಗಳಿಂದಲೇ ಭಗವಂತನನ್ನು ಅಲಂಕರಿಸುತ್ತಿದ್ದರು. ಗೋದಾ ಮಾಡುತ್ತಿದ್ದುದು ಇನ್ನೂ ಯಾರಿಗೂ ಗೊತ್ತಾಗಿರಲಿಲ್ಲ.





**10** ಹೀಗೆ ಅನೇಕ ದಿನಗಳು ಕಳೆದವು. ಒಂದು ದಿನ ಹಾರವನ್ನು ಹಾಕಿಕೊಂಡ ಗೋದಾ ತನ್ನನ್ನು ತಾನೇ ಮರೆತುಬಿಟ್ಟಳು. ಇದನ್ನು ತಂದೆ ಗಮನಿಸಿದರು. ಅವರಿಗೆ ಅತೀವ ಕೋಪ ಬಂತು...




**11** ತನ್ನ ಮಗಳು ಮಾಡಬಾರದ ದೊಡ್ಡ ತಪ್ಪು ಮಾಡಿಬಿಟ್ಟಳೆಂದು ಯೋಚಿಸಿದ ವಿಷ್ಣುಚಿತ್ತರ ಮನಸ್ಸು ಬಹಳ ಕದಡಿಹೋಯಿತು. ಅವರು ಆ ಹಾರಗಳಿಗೆ ಬದಲಾಗಿ, ಹೊಸ ಹಾರಗಳನ್ನು ತಯಾರಿಸಿಕೊಂಡು, ದೇವಸ್ಥಾನಕ್ಕೆ ತೆಗೆದುಕೊಂಡು ಹೋದರು.




**12** ಅಂದು ರಾತ್ರಿ ದೇವರೇ ವಿಷ್ಣುಚಿತ್ತರ ಕನಸಿನಲ್ಲಿ ಕಾಣಿಸಿಕೊಂಡನು.




**13** ಅಂದಿನಿಂದ ಆಳ್ವಾರರು ಗೋದೆಯು ಧರಿಸಿದ ಹೂವಿನ ಮಾಲೆಗಳನ್ನೇ ದೇವರ ವಿಗ್ರಹಕ್ಕೆ ಮುಡಿಸಲಾರಂಭಿಸಿದರು.




**14** ದಿನದಿನಕ್ಕೂ ಭಗವಂತನ ಮೇಲೆ ಗೋದಾದೇವಿ ಅಥವಾ ಆಂಡಾಳಳ ಭಕ್ತಿ ಬೆಳೆಯುತ್ತ ಹೋಯಿತು.

